# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

**ಐಎಸ್‌ಓ ಪ್ರಮಾಣೀಕೃತ – ಶಾಸನಬದ್ಧ ಸಹಕಾರಿ ಸಂಸ್ಥೆ**

**ನಿರ್ಮಾಣ ಭವನ, ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010.**

**www.souharda.coop, Ph: 080-23378375-80, E-mail: souharda@souharda.coop**


**ಸಂಖ್ಯೆ : ಸಂಸ/ಶಿವಿ/ತ–1/1/2017–18** **ದಿನಾಂಕ: 25.04.2017**

**ಇವರಿಗೆ,**

ಮಾನ್ಯ ಅಧ್ಯಕ್ಷರು/ಮುಖ್ಯ ಕಾರ್ಯನಿರ್ವಾಹಕರು

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು

**ಮಾನ್ಯರೇ,**

**ವಿಷಯ : ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಆಯೋಜಿಸಿರುವ "ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ" ಕಾರ್ಯಕ್ರಮದಲ್ಲಿ ಭಾಗವಹಿಸುವ ಕುರಿತು.**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಶಾಸನಬದ್ಧವಾಗಿ ರಚನೆಗೊಂಡು, ಅರೆನ್ಯಾಯಿಕ ಅಧಿಕಾರವನ್ನು ಹೊಂದಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿದೆ. ಜೊತೆಗೆ ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಪೂರಕವಾಗುವಂತಹ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳುತ್ತ ಬಂದಿದೆ. ಪ್ರಸ್ತುತ ಸಹಕಾರ ಕ್ಷೇತ್ರದ ಮೇಲೆ ಪರಿಣಾಮ ಉಂಟುಮಾಡುವಂತಹ ಅನೇಕ ಬದಲಾವಣೆಗಳು ಆರ್ಥಿಕ ಹಾಗೂ ಕಾನೂನು ಕ್ಷೇತ್ರದಲ್ಲಿ ಆಗುತ್ತಿರುವುದು ತಮ್ಮ ಗಮನಕ್ಕೆ ಕೂಡ ಬಂದಿರಬಹುದು. ಇಂತಹ ಬದಲಾವಣೆಗಳಿಗೆ ತಕ್ಕಂತೆ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಯಲ್ಲಿ ಕೂಡ ಬದಲಾವಣೆ ಮಾಡಿಕೊಂಡು ಕಾರ್ಯನಿರ್ವಹಿಸುವುದು ಇಂದಿನ ಅಗತ್ಯವಾಗಿದೆ.

ಪ್ರಸ್ತುತ ರಾಜ್ಯದ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸಿ ಅಭಿವೃದ್ಧಿ ಪಥದಲ್ಲಿ ಮುಂದುವರಿಯಬೇಕು ಎಂಬ ಉದ್ದೇಶದಿಂದ, ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗೆ ಎರಡು ದಿನಗಳ **"ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ"** ಕಾರ್ಯಕ್ರಮವನ್ನು, **ದಿನಾಂಕ 22 & 23 ಮೇ 2017 ರಂದು** ಬೆಂಗಳೂರಿನ ಬನಶಂಕರಿ 2ನೇ ಹಂತದ ಪದ್ಮನಾಭನಗರದಲ್ಲಿರುವ (ದೇವೇಗೌಡ ಪೆಟ್ರೋಲ್ ಬಂಕ್ ಎದುರು) **ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆಯಲ್ಲಿ** ಏರ್ಪಡಿಸಲಾಗಿದೆ. ಸಹಕಾರ ಕ್ಷೇತ್ರದಲ್ಲಿ ತಾವು ಒಬ್ಬ ಉತ್ತಮ ಅಧ್ಯಕ್ಷರಾಗಿ, ಪದಾಧಿಕಾರಿಯಾಗಿ, ನಿರ್ದೇಶಕರಾಗಿ ಕಾರ್ಯನಿರ್ವಹಿಸಲು ಈ ತರಬೇತಿ ಕಾರ್ಯಕ್ರಮ ಸಹಕಾರಿಯಾಗಲಿದೆ. ಆದ್ದರಿಂದ ತಾವು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಯೋಜನ ಪಡೆಯಲು ಕೋರಿದೆ.

ವಂದನೆಗಳೊಂದಿಗೆ,

ಸಹಿ/–
(ಶರಣಗೌಡ ಜಿ.ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

**ಭಾಗವಹಿಸಲು ಆಸಕ್ತ ಸೌಹಾರ್ದ ಸಹಕಾರಿಗಳ ಗಮನಕ್ಕಾಗಿ :**

- ಮೊದಲು ನೋಂದಾಯಿಸಿದವರಿಗೆ ಮೊದಲ ಆದ್ಯತೆ.
- ಪೂರ್ಣ 2 ದಿನಗಳು ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸುವ ಮಾನಸಿಕ ಸಿದ್ಧತೆ ಅವಶ್ಯ.
- ಭಾಗವಹಿಸುವ ಪ್ರತಿನಿಧಿಗಳು ತಾವು ಪ್ರತಿನಿಧಿಸುವ ಸಹಕಾರಿಯ ಬಗ್ಗೆ ಪೂರ್ಣ ವಿವರಗಳನ್ನು, ವಿಶೇಷ ಚಟುವಟಿಕೆಗಳ ಮಾಹಿತಿಯನ್ನು ತಿಳಿದುಕೊಂಡು ಬರುವುದು.
- ತರಬೇತಿ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಹಾಗೂ ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆಯ ನಿಯಮ ಹಾಗೂ ವ್ಯವಸ್ಥೆಗಳಿಗೆ ಬದ್ಧರಾಗಿರುವುದು.
- ಈ ಪತ್ರದ ಜೊತೆಯಲ್ಲಿ ಲಗತ್ತಿಸಿದ ನಮೂನೆಯಲ್ಲಿ ಭಾಗವಹಿಸುವ ಪ್ರತಿನಿದಿಗಳ ವಿವರಗಳನ್ನು ಕಳುಹಿಸುವುದು.
- ತರಬೇತಿಯ ನೋಂದಣಿ ಶುಲ್ಕ ರೂ.1000/–ವನ್ನು **"ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,"** ಬೆಂಗಳೂರು ಇದರ ಹೆಸರಿನಲ್ಲಿ ಚೆಕ್/ಡಿಡಿಯನ್ನು ಕಳುಹಿಸುವ ಮೂಲಕ ಪಾವತಿಸುವುದು.
- ಭಾಗವಹಿಸುವಿಕೆಯನ್ನು ನೋಂದಾಯಿಸಿಕೊಳ್ಳುವ ಕೊನೆಯ **ದಿನಾಂಕ 10 ಮೇ 2017**

**ಕಾರ್ಯಕ್ರಮದ ವಿವರಗಳು.**

| | |
|---|---|
| **ಕಾರ್ಯಕ್ರಮದ ದಿನಾಂಕ** | : 22 & 23 ಮೇ 2017 |
| **ಕಾರ್ಯಕ್ರಮದ ಸ್ಥಳ** | : ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು. |
| **ಕಾರ್ಯಕ್ರದ ಅವಧಿ ಹಾಗೂ ಸಮಯ** | : ಬೆಳಿಗ್ಗೆ 10:00 ರಿಂದ ಸಂಜೆ 5:30 ರವರೆಗೆ 2 ದಿನಗಳು ಪೂರ್ಣ. |
| **ಪ್ರತಿನಿಧಿಗಳ ಸಂಖ್ಯೆ** | : 60 ಜನರಿಗೆ ಮಾತ್ರ ಸೀಮಿತ |
| **ಪ್ರವೇಶ ಶುಲ್ಕ** | : ಒಬ್ಬರಿಗೆ ತಲಾ ರೂ.1000/– (ಎರಡು ದಿನಗಳಿಗೆ ಸೇರಿ) |
| **ವ್ಯವಸ್ಥೆ** | : ಊಟ, ವಸತಿ ಹಾಗೂ ಅಧ್ಯಯನ ಸಾಹಿತ್ಯ |

- **ವಿಶೇಷ ಗಮನಕ್ಕಾಗಿ :** ಸೌಹಾರ್ದ ಸಹಕಾರಿಗಳ **ಮಹಿಳಾ ನಿರ್ದೇಶಕರುಗಳಿಗೆ ವಿಶೇಷ ಎರಡು ದಿನಗಳ ತರಬೇತಿಯನ್ನು ದಿನಾಂಕ 26 & 27 ಮೇ 2017 ರಂದು,** ಬೆಂಗಳೂರಿನ ಬನಶಂಕರಿ 2ನೇ ಹಂತದ ಪದ್ಮನಾಭನಗರದಲ್ಲಿರುವ (ದೇವೇಗೌಡ ಪೆಟ್ರೋಲ್ ಬಂಕ್ ಎದುರು) **ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆಯಲ್ಲಿ** ಏರ್ಪಡಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಮಹಿಳಾ ನಿರ್ದೇಶಕರುಗಳು ಮಾತ್ರ ಭಾಗವಹಿಸಬಹುದಾಗಿರುತ್ತದೆ. ತಮ್ಮ ಸಹಕಾರಿಯ ಮಹಿಳಾ ಮೀಸಲು ಕ್ಷೇತ್ರದ ಪ್ರತಿನಿಧಿಯಾಗಿರುವ ಎರಡು ಮಹಿಳಾ ನಿರ್ದೇಶಕರು ಈ ತರಬೇತಿಯಲ್ಲಿ ಭಾಗವಹಿಸಬಹುದಾಗಿರುತ್ತದೆ. ತರಬೇತಿ ಶುಲ್ಕ ರೂ.500/– ಆಗಿದ್ದು ಉಳಿದಂತೆ ಮೇಲ್ಕಂಡ ವಿವರಗಳು ಸದರಿ ತರಬೇತಿಗೆ ಕೂಡ ಅನ್ವಯಿಸುತ್ತವೆ.